ನಿಮ್ಮೊಡನೆ

# ಬೆಂಗಳೂರನ್ನು ಬರಡಾಗಿಸುವಲ್ಲಿ ನಮ್ಮ ಕೈ ಸೇರದಿರಲಿ

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಭಾರತದ ನಗರ ಎನ್ನುವ ಅಗ್ಗಳಿಕೆಯ ಬೆಂಗಳೂರು, ಅತಿ ವೇಗದ ಬೆಳವಣಿಗೆಯನ್ನು ಕಾಣುತ್ತಿರುವ ವಿಶ್ವದ ಹತ್ತು ನಗರಗಳಲ್ಲೊಂದೂ ಹೌದು. ಬೆಳವಣಿಗೆಯ ನಾಗಾಲೋಟವನ್ನು ಕಂಡು ಸಂತಸಪಡುವಂತಿಲ್ಲ. ಭವಿಷ್ಯದ ಬೆಂಗಳೂರು ನೀರಿಲ್ಲದೆ ಇರುವ ದಿನಗಳನ್ನೂ ಎದುರಿಸಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. 'ಸೊಸೈಟಿ ಫಾರ್ ಕಮ್ಯುನಿಟಿ ಹೆಲ್ತ್ ಅವೇರ್‌ನೆಸ್ ರಿಸರ್ಚ್ ಅಂಡ್ ಆ್ಯಕ್ಷನ್' (SOCHARA) ಸಂಸ್ಥೆಯ ಕಾರ್ಯದರ್ಶಿ ಪ್ರಫುಲ್ಲ ಸಾಲಿಗ್ರಾಮ್, ನೀರಿಲ್ಲದೆ ಇರುವ ದಿನಗಳನ್ನು ಬೆಂಗಳೂರು ತಲುಪುವ ಸ್ಥಿತಿ ದೂರವೇನೂ ಇಲ್ಲ ಎಂದು ಹೇಳಿದ್ದಾರೆ. 'ಎರಡು ಮೂರು ಶತಮಾನಗಳ ಹಿಂದೆ ಬೆಂಗಳೂರಿನಲ್ಲಿ ಸುಮಾರು 400 ಕೆರೆಗಳಿದ್ದವು. ಅವುಗಳಲ್ಲಿ ಬಹಳಷ್ಟು ಕೆರೆಗಳನ್ನು ನಗರದ ಅಡ್ಡಾದಿಡ್ಡಿ ಬೆಳವಣಿಗೆಯಿಂದಾಗಿ ಕಳೆದುಕೊಂಡಿದ್ದೇವೆ' ಎನ್ನುವ ಅವರು, ಜಲ ಜಾಗೃತಿಯ ಬಗ್ಗೆ ಸಮಷ್ಟಿ ಪ್ರಜ್ಞೆ ಮೂಡದೆ ಹೋದರೆ ಬೆಂಗಳೂರಿಗೆ ಉಳಿಗಾಲವಿಲ್ಲ ಎನ್ನುವುದನ್ನು ಒತ್ತಿ ಹೇಳಿದ್ದಾರೆ.


ಮಳೆಗಾಲ ಚಾಲ್ತಿಯಲ್ಲಿರುವ ಸಂದರ್ಭ ನೀರಿನ ಬಿಕ್ಕಟ್ಟಿನ ಕುರಿತು ಯೋಚಿಸಲು ಸಕಾಲ. ಬೆಂಗಳೂರಿನಲ್ಲಿ ಈ ಮಳೆಗಾಲ ತೃಪ್ತಿಕರವಾಗಿಲ್ಲದಿದ್ದರೂ, ಪ್ರತಿ ಬಾರಿ ಮಳೆ ಸುರಿದಾಗಲೂ ಅಪಾರ ಪ್ರಮಾಣದ ನೀರು ಚರಂಡಿಗಳಲ್ಲಿ ಹರಿದು ಹೋಗುತ್ತಿರುವುದಕ್ಕೆ ರಾಜಧಾನಿಯ ನಾಗರಿಕರು ಮೂಕಪ್ರೇಕ್ಷಕರಾಗಿದ್ದಾರೆ. ಮಳೆ ನೀರಿನ ಕೊಯಿಲು ಹಾಗೂ ಮಣ್ಣಿಗೆ ನೀರು ಸೇರಿಸುವ ಅಗತ್ಯದ ಕುರಿತು ತಜ್ಞರು ಆಗಾಗ್ಗೆ ಮಾತನಾಡುತ್ತಲೇ ಇದ್ದಾರೆ. ಆದರೆ, ಮಳೆನೀರನ್ನು 'ಸಂಗ್ರಹಿಸಬಹುದಾದ ಸಂಪತ್ತು' ಎಂದು ಭಾವಿಸಿರುವ ನಾಗರಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿಲ್ಲ. ಜಲಮಂಡಳಿಯ ಒತ್ತಾಯದಿಂದಾಗಿ ಕೆಲವರು ಮಳೆಕೊಯಿಲಿನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಆದರೆ, ಮಳೆನೀರಿನ ಕೊಯಿಲು ಮಾಡುವುದಕ್ಕಿಂತಲೂ ದಂಡ ಕಟ್ಟುವುದೇ ಅನೇಕರಿಗೆ ಸುಲಭವಾದಂತಿದೆ. ಒಂದೆಡೆ ನೀರಿನ ಕಾಳಜಿಯ ಬಗ್ಗೆ ನಿರುತ್ಸಾಹ ಎದ್ದು ಕಾಣಿಸುತ್ತಿದ್ದರೆ, ಇನ್ನೊಂದೆಡೆ ನೀರಿನ ಪೋಲು ಎಗ್ಗಿಲ್ಲದೆ ನಡೆಯುತ್ತಿದೆ. ಕಾರು ತೊಳೆಯಲು, ಮನೆಯ ಅಂಗಳ ತೊಳೆಯಲು ಅಪಾರ ಪ್ರಮಾಣದ ನೀರನ್ನು ಖರ್ಚು ಮಾಡುವುದು ಅಮಾನವೀಯ ಎಂದು ನಮಗನ್ನಿಸದೆ ಹೋದರೆ, ಬೆಂಗಳೂರನ್ನು ಬರಡುಗೊಳಿಸಲು ನಾವೂ ಕೈಜೋಡಿಸುತ್ತಿದ್ದೇವೆ ಎಂದೇ ಅರ್ಥ.

ನಿರುತ್ಸಾಹದ ನಡುವೆಯೂ ಸಾರ್ವಜನಿಕರಲ್ಲಿ ನೀರಿನ ಬಗ್ಗೆ ಜಾಗೃತಿ ಮೂಡಿಸುವ ಸಣ್ಣ ಪುಟ್ಟ ಕಾರ್ಯಕ್ರಮಗಳು ಚಾಲ್ತಿಯಲ್ಲಿವೆ. ಮಕ್ಕಳಲ್ಲಿ ನೀರಿನ ಅರಿವು ಮೂಡಿಸುವ ಪ್ರಯತ್ನಗಳು ನಡೆದಿವೆ. ಆದರೆ, ಜಲಸಂರಕ್ಷಣೆಯ ಕಾರ್ಯಕ್ರಮಗಳಿಗೆ ಸರ್ಕಾರದ ಬೆಂಬಲ ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಹನಿ ಹನಿ ಸೇರಿದರೆ ಹಳ್ಳ ಎನ್ನುವ ಮಾತಿನಲ್ಲಿ ವ್ಯವಸ್ಥೆಗೆ ಆಸಕ್ತಿಯಿಲ್ಲ. ದೊಡ್ಡ ಮೊತ್ತದ ಯೋಜನೆಗಳನ್ನು ರೂಪಿಸುವುದರಲ್ಲಿ ಸರ್ಕಾರಕ್ಕೆ ಆಸಕ್ತಿ. ಬಯಲುಸೀಮೆಯ ಬಾಯಾರಿಕೆಗೆ ನೇತ್ರಾವತಿಯಿಂದ ನೀರು ತರಲು ಯೋಜನೆ ರೂಪುಗೊಳ್ಳುತ್ತದೆ; ಬೆಂಗಳೂರಿನ ಬಿಕ್ಕಟ್ಟಿಗೆ ಮೇಕೆದಾಟು ಯೋಜನೆಯ ಕಾಮನಬಿಲ್ಲು ತೋರಿಸಲಾಗುತ್ತದೆ. ಇವೆಲ್ಲ ಎಷ್ಟರಮಟ್ಟಿಗೆ ಹಾಗೂ ಎಷ್ಟು ಕಾಲ ಕಾರ್ಯಸಾಧ್ಯ ಎನ್ನುವುದರ ಬಗ್ಗೆ ಆಡಳಿತದಲ್ಲಿ ಇರುವವರು ಯೋಚಿಸುವುದಿಲ್ಲ. ಈ ಯೋಜನೆಗಳಿಂದ ಪರಿಸರದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆಕರ್ಷಕ ಯೋಜನೆಗಳ ಮೂಲಕ ಜನರನ್ನು ಮರುಳುಗೊಳಿಸುವುದರಲ್ಲಿ ಸರ್ಕಾರಕ್ಕೆ ಲಾಭವಿದೆ, ರಾಜಕಾರಣಿಗಳ ಹಿತಾಸಕ್ತಿಯೂ ಅಡಗಿದೆ.

ಪರಿಸರ ಸಂರಕ್ಷಣೆಯ ಬಗ್ಗೆ ಸರ್ಕಾರಗಳ ಸಂವೇದನಾರಾಹಿತ್ಯ ಮತ್ತೆ ಮತ್ತೆ ಪ್ರಕಟಗೊಳ್ಳುತ್ತಿರುತ್ತದೆ. ಕಪ್ಪತಗುಡ್ಡದ ಉದಾಹರಣೆಯನ್ನೇ ನೋಡಿ. ವನ್ಯಜೀವಿಧಾಮವೂ, ಅಮೂಲ್ಯ ಗಿಡಮೂಲಿಕೆಗಳ ಆಗರವೂ ಆಗಿರುವ ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ನಡೆಸಲಿಕ್ಕೆ ಮತ್ತೆ ಮತ್ತೆ ಪ್ರಯತ್ನಗಳು ನಡೆಯುತ್ತಿವೆ. ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿಧಾಮದ 10 ಕಿ.ಮೀ. ವ್ಯಾಪ್ತಿಯಲ್ಲಿ 28 ಗಣಿಗಾರಿಕೆಗಳಿಗೆ ಅನುಮತಿ ಕೋರಿರುವ ಪ್ರಸ್ತಾವನೆಗಳು ವನ್ಯಜೀವಿ ಮಂಡಳಿಯ ಮುಂದಿವೆ. ಈಗಾಗಲೇ ವಿದ್ಯುತ್ ಉತ್ಪಾದಿಸುವ ಗಾಳಿಯಂತ್ರಗಳನ್ನು ಮೈತುಂಬಾ ನೆಟ್ಟುಕೊಂಡಿರುವ ಗುಡ್ಡವನ್ನು ಬಗೆದು ವಿಕೃತಗೊಳಿಸಲು ಯೋಜನೆಗಳು ರೂಪುಗೊಂಡಿವೆ. ಈ ಯೋಜನೆಗಳಿಗೆ ಸರ್ಕಾರದಿಂದ ಅನುಮತಿ ದೊರೆಯುತ್ತದೋ ಇಲ್ಲವೋ ಬೇರೆಯ ವಿಷಯ. ಇಂಥ ಯೋಜನೆಗಳು ರೂಪುಗೊಳ್ಳುತ್ತವಲ್ಲ ಎನ್ನುವುದೇ ನಾಗರಿಕ ಸಮಾಜದಲ್ಲಿ ಚೋದ್ಯದ ವಿಷಯ. ಪರಿಸರವನ್ನು ನಾಶಗೊಳಿಸಿ ಸಾಧಿಸುವ ಅಭಿವೃದ್ಧಿ ಮೃತ್ಯುಪ್ರಾಯವಾದುದು ಎನ್ನುವ ಅರಿವು ಸರ್ಕಾರಕ್ಕೂ ಇದೆ, ಗಣಿಗಾರಿಕೆಯ ಉತ್ಸಾಹದಲ್ಲಿರುವ ಖಾಸಗಿ ಸಂಸ್ಥೆಗಳಿಗೂ ಇದೆ. ಆದರೆ, ಈ ಅರಿವಿನ ಮೇಲೆ ಧನದಾಹ ಮೇಲುಗೈ ಸಾಧಿಸಿದೆ. ಸರ್ಕಾರ ಕೈಬಿಟ್ಟ ಸಂದರ್ಭದಲ್ಲಿ ಪರಿಸರವನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ಸಮಷ್ಟಿಯದೇ ಆಗಿದೆ. ಏಕೆಂದರೆ, ಸರ್ಕಾರ ವರ್ತಮಾನದ ಬಗ್ಗೆಯಷ್ಟೇ ಯೋಚಿಸುತ್ತದೆ; ನಾಳೆಗಳ ಬಗ್ಗೆ ಯೋಚಿಸುವ ಉತ್ತರದಾಯಿತ್ವವನ್ನು ಜನಸಾಮಾನ್ಯರು ನಿರ್ವಹಿಸಿರುವ ಉದಾಹರಣೆಗಳೇ ಇತಿಹಾಸದಲ್ಲಿ ಹೆಚ್ಚಾಗಿವೆ.

■ ರಘುನಾಥ ಚ.ಹ.

ಸರ್ಕಾರ ವರ್ತಮಾನದ ಬಗ್ಗೆಯಷ್ಟೇ ಯೋಚಿಸುತ್ತದೆ; ನಾಳೆಗಳ ಬಗ್ಗೆ ಯೋಚಿಸುವ ಉತ್ತರದಾಯಿತ್ವವನ್ನು ಜನಸಾಮಾನ್ಯರೇ ಹೊರಬೇಕು. ಬೆಂಗಳೂರಿನ ನೀರಿನ ಬಿಕ್ಕಟ್ಟಿನ ಶಮನ ಅಥವಾ ಕಪ್ಪತಗುಡ್ಡದ ಸಂರಕ್ಷಣೆ ಜನರಿಂದಷ್ಟೇ ಆಗಬೇಕು.


ಈಶ್ವರ್